ನಡೆಸಿದ್ದು, ಸಾಂಸ್ಕೃತಿಕ ಕಾರ್ಯಕ್ರಮಗಳಾದ ಮಕ್ಕಳ ಯಕ್ಷಗಾನ, ಭರತನಾಟ್ಯ, ಸುಗಮ ಸಂಗೀತ ನಡೆಲಾಗಿದೆ. ಈ ಕಾರ್ಯಕ್ರಮಕ್ಕೆ ರೂ. 1.60 ಲಕ್ಷಗಳ ಖರ್ಚು ತಗುಲಿದೆ.

6). ಬೆಳಗಾವಿಯಲ್ಲಿ ಕನ್ನಡ ಚಿಂತನೆ ಕಾರ್ಯಕ್ರಮವನ್ನು ದಿನಾಂಕ:10–8–2010 ರಂದು ಹಮ್ಮಿಕೊಳ್ಳಲಾಗಿದೆ.

7. ಮಧುಗಿರಿಯಲ್ಲಿ ರಸಗ್ರಹಣ ಕಾರ್ಯಕ್ರಮವನ್ನು ದಿನಾಂಕ: 31–7–2010 ರಂದು ನಡೆಸಲಾಗಿದೆ.

8. ಕನ್ನಡ ನುಡಿತೇರು ಕಾರ್ಯಕ್ರಮವನ್ನು ದಿನಾಂಕ:19–8–2010 ರಂದು ಪಾವಗಡದಲ್ಲಿ ಹಮ್ಮಿಕೊಳ್ಳಲಾಗಿದೆ.

9. 2010–11ನೇ ಸಾಲಿನಲ್ಲಿ ಕರ್ನಾಟಕದ ಗಡಿ ಭಾಗದಲ್ಲಿರುವ ತಾಲ್ಲೂಕು ಹಾಗೂ ಜಿಲ್ಲೆಗಳಿಗೆ ಕನ್ನಡ ಭವನ ನಿರ್ಮಾಣಕ್ಕೆ 1. ಇಂಡಿ, ಬಿಜಾಪುರ ಜಿಲ್ಲೆ, 2. ಚಿಕ್ಕೋಡಿ, ಬೆಳಗಾವಿ ಜಿಲ್ಲೆ, 3. ಸಾವದಗಿ ಗುಲಬರ್ಗಾ ಜಿಲ್ಲೆ, 4. ಯಲ್ಲಾಪುರ, ಕಾರವಾರಗಳಿಗೆ ತಲಾ ರೂ.7.50 ಲಕ್ಷ, 1. ಮಳವಳ್ಳಿ ಮಂಡ್ಯ ಜಿಲ್ಲೆ, 2. ಪಿರಿಯಪಟ್ಟಣ, ಮೈಸೂರು ಜಿಲ್ಲೆ, 3. ಪಾವಗಡ, ತುಮಕೂರು ಜಿಲ್ಲೆ. 4. ಭಾಲ್ಕಿ ಬೀದರ್ ಜಿಲ್ಲೆಗಳಿಗೆ ತಲಾ ರೂ.10.00 ಲಕ್ಷ ಮತ್ತು 1. ಬೀದರ್ ನಗರ, 2. ಹೂಟಗಳ್ಳಿ, ಮೈಸೂರು ನಗರಗಳಿಗೆ ತಲಾ ರೂ. 15.00 ಲಕ್ಷಗಳ ಅನುದಾನ ನೀಡಲಾಗಿದೆ.

ಐ.ಟಿ.ಐ. ಶಿಕ್ಷಣ ಸಂಸ್ಥೆಗಳ ಕಟ್ಟಡ ಉಪನ್ಯಾಸಕರ ಕೊರತೆ

33(34): ಶ್ರೀ ಸಂಪಂಗಿ ಎನ್. (ಬಾಗೇಪಲ್ಲಿ): ಮಾನ್ಯ ಕಾರ್ಮಿಕ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಬಾಗೇಪಲ್ಲಿ ಗುಡಿಬಂಡೆ ತಾಲ್ಲೂಕುಗಳಲ್ಲಿ ಐ.ಟಿ.ಐ. ಶಿಕ್ಷಣ ಸಂಸ್ಥೆಗಳನ್ನು ಪ್ರಾರಂಭಿಸಲಾಗಿದ್ದು ಸ್ವಂತ ಕಟ್ಟಡ ಸೌಲಭ್ಯ ಹಾಗೂ ಶಿಕ್ಷಕರು ಇಲ್ಲದೇ ವಿದ್ಯಾರ್ಥಿಗಳಿಗೆ ತೊಂದರೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಬಂದಿದ್ದಲ್ಲಿ ಸದರಿ ಸಮಸ್ಯೆಯನ್ನು ನಿವಾರಿಸಲು ಸರ್ಕಾರ ಕೈಗೊಂಡ ಕ್ರಮಗಳೇನು?

ಶ್ರೀ ಬಿ. ಎನ್. ಬಚ್ಚೇಗೌಡ (ಕಾರ್ಮಿಕ ಸಚಿವರು):

ಅ) ಹೌದು.

ಆ) ಬಾಗೇಪಲ್ಲಿಯಲ್ಲಿ ಸ್ವಂತ ಕಟ್ಟಡ ನಿರ್ಮಿಸಲು 7.23 ಎಕರೆ ನಿವೇಶನವನ್ನು ಸ್ವಾಧೀನ ಪಡಿಸಿಕೊಂಡಿದ್ದು ನಬಾರ್ಡ್ ಅಡಿ ಪರಿಗಣಿಸಲು

ಕೋರಿ ಪ್ರಸ್ತಾವನೆ ಸಲ್ಲಿಸಲಾಗಿದೆ. ಬಾಗೇಪಲ್ಲಿಯಲ್ಲಿ ಪ್ರಾಚಾರ್ಯರ ಹುದ್ದೆಯೂ ಸೇರಿದಂತೆ ಒಟ್ಟು 11 ಹುದ್ದೆಗಳು ಮಂಜೂರಾಗಿದ್ದು, 7 ಹುದ್ದೆಗಳನ್ನು ಭರ್ತಿ ಮಾಡಲಾಗಿದ್ದು ಖಾಲಿ ಹುದ್ದೆಗಳನ್ನು ಭರ್ತಿ ಮಾಡಲು ಕ್ರಮ ತೆಗೆದುಕೊಳ್ಳಲಾಗಿರುತ್ತದೆ. ಗುಡಿಬಂಡೆ ಸರ್ವೆ ನಂ. 145 ಮತ್ತು 142 ರಲ್ಲಿ ಒಟ್ಟು 3.19 ಎಕರೆ ಭೂಮಿಯನ್ನು ಗುರುತಿಸಿದ್ದು, ಸ್ವಾಧೀನ ಪಡಿಸಿಕೊಳ್ಳುವ ಪ್ರಕ್ರಿಯೆ ಜಾರಿಯಲ್ಲಿದೆ. ಗುಡಿಬಂಡೆ ಐಟಿಐ 2008–09ನೇ ಸಾಲಿನಲ್ಲಿ ಪ್ರಾರಂಭವಾಗಿದ್ದು ಹುದ್ದೆಗಳ ಸೃಜನೆಗೆ ಕ್ರಮ ತೆಗೆದುಕೊಳ್ಳಲಾಗುತ್ತಿದೆ. ಇಲಾಖೆಯಲ್ಲಿ ಹಾಲಿ ಲಭ್ಯವಿರುವ ಸಿಬ್ಬಂದಿಯನ್ನು ನಿಯೋಜಿಸಿ ಹಾಗೂ ಅತಿಥಿ ಬೋಧಕರನ್ನು ನೇಮಕ ಮಾಡಿಕೊಂಡು ವಿದ್ಯಾರ್ಥಿಗಳಿಗೆ ತರಬೇತಿ ನೀಡಲು ವ್ಯವಸ್ಥೆ ಮಾಡಲಾಗಿದೆ.

ಅನುಬಂಧ-III

ದಿನಾಂಕ: 11–01–2011 ರ ಚುಕ್ಕೆ ಗುರುತಿನ ಪ್ರಶ್ನೋತ್ತರ

ಶ್ರೀರಂಗಪಟ್ಟಣ ವಿಧಾನಸಭಾ ಕ್ಷೇತ್ರದಲ್ಲಿ ಕನ್ನಡ ಗಂಗಾ ಯೋಜನೆಯಡಿ ಸರ್ಕಾರಿಂದ ಬಿಡುಗಡೆಯಾಗಿರುವ ಅನುದಾನದ ಬಗ್ಗೆ

14(42): ಶ್ರೀ ರಮೇಶ್ ಬಂದಿಸಿದ್ದೇಗೌಡ ಎ.ಬಿ. (ಶ್ರೀರಂಗಪಟ್ಟಣ): ಮಾನ್ಯ ನಗರಾಭಿವೃದ್ಧಿ ಕಾನೂನು ಹಾಗೂ ಸಂಸದೀಯ ವ್ಯವಹಾರಗಳ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಮಂಡ್ಯ ಜಿಲ್ಲೆಯ ಶ್ರೀರಂಗಪಟ್ಟಣ ವಿಧಾನಸಭಾ ಕ್ಷೇತ್ರದಲ್ಲಿ ಕನ್ನಡ ಗಂಗಾ ಯೋಜನೆಯಡಿಯಲ್ಲಿ ಕುಡಿಯುವ ನೀರು ಶುದ್ಧೀಕರಣ ಯೋಜನೆಗೆ ಸರ್ಕಾರದಿಂದ ಬಿಡುಗಡೆಯಾಗಿರುವ ಅನುದಾನವೆಷ್ಟು?

ಆ) ಈ ಯೋಜನೆ ಎಂದಿನಿಂದ ಪ್ರಾರಂಭವಾಯಿತು ಹಾಗೂ ಯಾವಾಗ ಮುಕ್ತಾಯವಾಗುತ್ತದೆ? (ವಿವರಗಳನ್ನು ಒದಗಿಸುವುದು);

ಇ) ಕನ್ನಡ ಗಂಗಾ ಯೋಜನೆಯಡಿ ಎಷ್ಟು ನೀರು ಶುದ್ಧೀಕರಣ ಉಪಕರಣಗಳನ್ನು ಖರೀದಿಸಲಾಗಿದೆ? (ಸಂಪೂರ್ಣ ವಿವರಗಳನ್ನು ಒದಗಿಸುವುದು);

ಶ್ರೀ ಎಸ್. ಸುರೇಶ್ ಕುಮಾರ್ (ನಗರಾಭಿವೃದ್ಧಿ, ಕಾನೂನು ಹಾಗೂ ಸಂಸದೀಯ ವ್ಯವಹಾರಗಳ ಸಚಿವರು):

ಅ) ಯಾವುದೇ ಅನುದಾನ ಬಿಡುಗಡೆಯಾಗಿರುವುದಿಲ್ಲ